**ಸಿ.ಸಿ 2168/2021** **ಪಿ.ಡಬ್ಲ್ಯೂ- 1**

**ದಿನಾಂಕಃ 17/05/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ- ಶ್ರೀ ಎಂ.ಇ.ಎಸ್. ವಕೀಲರಿಂದ**

ನಾನು ರೈತನಾಗಿರುತ್ತೇನೆ. ನಾನು ವ್ಯವಸಾಯದ ಜಮೀನನ್ನು ಮಾತ್ರ ಮಾಡುವುದು ಬೇರೇನು ಮಾಡುವುದಿಲ್ಲ. ನನಗೆ 5 ಎಕರೆ ಜಮೀನು ಇರುತ್ತದೆ. ಅದರಲ್ಲಿ ನನ್ನ ಹೆಸರಿನಲ್ಲಿ 3 ಎಕರೆ ಜಮೀನು ಇರುತ್ತದೆ. ಸದರಿ 3 ಎಕರೆ ಜಮೀನಿನ ಪಹಣಿಯಲ್ಲಿ ಖುಷ್ಕಿ ಮತ್ತು ತೋಟ ಎಂದು ನಮೂದು ಆಗಿರುತ್ತದೆ. ನಾನು ಶುಂಠಿ, ರೇಷ್ಮೆ, ಆಲೂಗೆಡ್ಡೆ, ಮೆಣಸು ಇತ್ಯಾದಿ ಬೆಳೆಗಳನ್ನು ಬೆಳೆಯುತ್ತೇನೆ. ನಾನು ಬೆಳೆದ ಬೆಳೆಯನ್ನು ನನಗೆ ಎಲ್ಲಿ ಅನುಕೂಲವಾಗುತ್ತದೋ ಅಲ್ಲಿಗೆ ಕೊಡುತ್ತೇನೆ. ನಾನು ಬೆಳೆದ ಬೆಳೆಯನ್ನು ಮಾರಾಟ ಮಾಡಿದ ಬಗ್ಗೆ ದಾಖಲೆಗಳನ್ನು ಇಟ್ಟುಕೊಂಡಿಲ್ಲ.

2. ನಾನು ವಾರ್ಷಿಕವಾಗಿ 8-9 ಲಕ್ಷ ರೂ. ಆದಾಯ ಬರುತ್ತದೆ. ನನಗೆ ಎಲ್ಲಾ ಖರ್ಚು ಕಳೆದು ವಾರ್ಷಿಕವಾಗಿ 3-5 ಲಕ್ಷ ರೂ. ಹಣ ಉಳಿಯುತ್ತದೆ. ನಾನು ಸದರಿ ಆದಾಯಕ್ಕೆ ಸಂಬಂಧಿಸಿದಂತೆ ಆದಾಯ ತೆರಿಗೆ ಘೋಷಣೆ ಮಾಡಿಕೊಂಡಿರುವುದಿಲ್ಲ. ನನ್ನ ಮಕ್ಕಳು ಸರ್ಕಾರಿ ಶಾಲೆಯಲ್ಲಿ ಓದುತ್ತಿದ್ದಾರೆ ಅವರುಗಳು ಓದುತ್ತಿರುವ ಶಾಲೆಗೆ ಆದಾಯ ದೃಢೀಕರಣ ಪತ್ರವನ್ನು ಕೊಟ್ಟಿರುವುದಿಲ್ಲ. ನನ್ನ ಒಬ್ಬ ಮಗ ತೆರಣ್ಯದ ಬಳಿ ಇರುವ ಗ್ರೀನ್ ಅರ್ಥ್ ಶಾಲೆಯಲ್ಲಿ ಓದುತ್ತಿದ್ದು, ನನ್ನ ಮಗಳು ಊರಿನಲ್ಲಿ ಅಂದರೆ ನಿಡುವಣೆ ಗ್ರಾಮದಲ್ಲಿ ಓದುತ್ತಿದ್ದಾರೆ. ನನ್ನ ಮಕ್ಕಳನ್ನು ಶಾಲೆಗೆ ದಾಖಲು ಮಾಡಿಸುವ ಸಂದರ್ಭದಲ್ಲಾಗಲೀ ಅಥವಾ ಅವರ ಶಾಲಾ ಶುಲ್ಕವನ್ನು ಪಾವತಿ ಮಾಡುವ ಸಂದರ್ಭದಲ್ಲಾಗಲೀ ಅವರುಗಳ ಆದಾಯ ದೃಢೀಕರಣ ಪತ್ರವನ್ನು ಯಾವ ಶಾಲೆಯಲ್ಲಿಯೂ ಕೊಟ್ಟಿರುವುದಿಲ್ಲ. ಸಾಕ್ಷಿಯು ಮುಂದುವರಿದು ನನ್ನ ಮಕ್ಕಳನ್ನು ಶಾಲೆಗೆ ದಾಖಲು ಮಾಡಿಸುವ ಸಂದರ್ಭದಲ್ಲಿ ಕೇಳಿದ್ದರು ಆ ಸಂದರ್ಭದಲ್ಲಿ ಆದಾಯ ದೃಢೀಕರಣ ಪತ್ರವನ್ನು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಆ ರೀತಿ ಶಾಲೆಗೆ ಕೊಟ್ಟಿರುವ ಆದಾಯ ದೃಢೀಕರಣ ಪತ್ರದಲ್ಲಿ ನನ್ನ ಆದಾಯವನ್ನು ಅಂದಾಜು ಒಂದೂವರೆ ಲಕ್ಷ ರೂ. ಎಂಬುದಾಗಿ ಹೇಳಿಕೊಂಡಿರಬಹುದು. ನಿಮ್ಮ ಆದಾಯ ದೃಢೀಕರಣ ಪತ್ರನ್ನು ಹಾಜರುಪಡಿಸಿ ಎಂದು ನಾವು ಅರ್ಜಿ ಹಾಕಿದರೇ ನೀವು ಅದನ್ನು ತಂದು ಹಾಜರುಪಡಿಸಬಲ್ಲಿರೇ ಎಂದರೆ ಸಾಕ್ಷಿಯು ಹಾಜರುಪಡಿಸಬಹುದು ಎಂದು ನುಡಿಯುತ್ತಾರೆ.

3. ನಾನು ಪ್ರತ್ಯೇಕವಾಗಿ ವಾಸವಾಗಿದ್ದೇನೆ. ನಾನು ಪಡಿತರ ಸಾಮಾನನ್ನು ನಿಡುವಣಿ ನ್ಯಾಯಾಲಯ ಅಂಗಡಿಯಲ್ಲಿ ಪಡೆದುಕೊಳ್ಳುತ್ತೇನೆ. ನನಗೆ ಬಿಪಿಎಲ್ ಪಡಿತರ ಚೀಟಿಯನ್ನು ಕೊಟ್ಟಿರುತ್ತಾರೆ. ಬಿಪಿಎಲ್ ಕಾರ್ಡನ್ನು ಯಾವುದೇ ಅದಾಯ ಇಲ್ಲದ ಕಡುಬಡವರಿಗೆ ಕೊಡಲಾಗುತ್ತದೆ ಎಂದರೆ ಸರಿ.

4. ನಾನು ನಂಜೇಗೌಡರ ವಿರುದ್ಧ ಈ ಫಿರ್ಯಾದನ್ನು ಸಲ್ಲಿಸಿರುತ್ತೇನೆ. ಸದರಿ ನಂಜೇಗೌಡರವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ಆರೋಪಿ ನಿಮಗೆ ಹೇಗೆ ಪರಚಯಸ್ಥರು ಎಂದರೆ ಸಾಕ್ಷಿಯು ಆರೋಪಿಯ ಪತ್ನಿಯ ಊರು ಬಾರೆಕೊಪ್ಪಲು ಗ್ರಾಮ. ಆರೋಪಿ ಅವರ ಪತ್ನಿ ಮನೆಗೆ ಬರಬೇಕಾದರೆ ನಮ್ಮ ಊರಿನ ಮುಖಾಂತರ ಅಂದರೆ ನಮ್ಮ ಮನೆಯ ಮುಂಭಾಗದಲ್ಲಿರುವ ರಸ್ತೆಯ ಮೂಲಕ ಹೋಗಬೇಕಾಗುತ್ತದೆ. ಆರೋಪಿ ಸದರಿ ರಸ್ತೆಯ ಮೂಲಕ ಹೋಗಿ ಬರುವುದು ಮಾಡುತ್ತಿದ್ದರಿಂದ ನನಗೆ ಪರಿಚಯ ಎಂದು ನುಡಿಯುತ್ತಾರೆ. ಕೆಲವು ಬಾರಿ ಆರೋಪಿ ಒಬ್ಬರೇ ಅವರ ಪತ್ನಿಯ ಊರಿಗೆ ಬರುತ್ತಿದ್ದರು, ಕೆಲವೊಂದು ಬಾರಿ ಕುಟುಂಬದ ಜೊತೆ ಬರುತ್ತಿದ್ದರು.

5. ಆರೋಪಿಯ ಪತ್ನಿಯ ಹೆಸರು ನನಗೆ ಗೊತ್ತಿಲ್ಲ. ನಾನು 2 ಬ್ಯಾಂಕುಗಳಲ್ಲಿ ಖಾತೆಯಲ್ಲಿ ಹೊಂದಿರುತ್ತೇನೆ. ಅವೆಂದರೆ ಹೊಳೆನರಸೀಪುರದ ಎಸ್.ಬಿ.ಐ. ಹಾಗೂ ಹೊಳೆನರಸೀಪುರದ ಕೆನರಾ ಬ್ಯಾಂಕುಗಳು. ಸದರಿ 2 ಬ್ಯಾಂಕ್ ಖಾತೆಗಳಲ್ಲಿ ನಾನು ಚೆಕ್ ಬುಕ್ ಗಳನ್ನು ಪಡೆದಿರುತ್ತೇನೆ. ನಾನು ಚೆಕ್ ಮೂಲಕ ಹಣವನ್ನು ಇಲ್ಲಿಯವರೆಗೂ ತೆಗೆದಿಲ್ಲ. ಅದೇ ರೀತಿ ಚೆಕ್ ಮೂಲಕ ಯಾರಿಗೂ ಹಣವನ್ನು ಕೊಟ್ಟಿಲ್ಲ. ನಾನು 1 ಲಕ್ಷ, 2 ಲಕ್ಷ, 3 ಲಕ್ಷ ಹೀಗೆ ನಗದನ್ನು ಯಾವುತ್ತು ಕೂಡ ನನ್ನ ಬ್ಯಾಂಕ್ ಖಾತೆಗೆ ಹಾಕಿರುವುದಿಲ್ಲ.

6. ಆರೋಪಿ ನನಗೆ 6-7 ವರ್ಷಗಳಿಂದ ಪರಿಚಯಸ್ಥರು. ದಿಃ 01.09.2021 ರಂದು ಆರೋಪಿ ನನ್ನಲ್ಲಿ ಹಣವನ್ನು ಕೇಳಿರುತ್ತಾರೆ. ದಿಃ 01.09.2021 ರಂದು ಆರೋಪಿ ನನ್ನ ಬಳಿ ಬಂದು ಹಣವನ್ನು ಕೇಳಿರುತ್ತಾರೆ ಎಂದು ನಾನು ಫಿರ್ಯಾದಿನಲ್ಲಿ ಬರೆಸಿಲ್ಲ. ಆ ದಿನ ಆರೋಪಿ ಒಬ್ಬರೇ ನಮ್ಮ ಮನೆಗೆ ಬಂದಿದ್ದರು. ಆ ಸಮಯದಲ್ಲಿ ನಾನು ನಮ್ಮ ಮನೆಯಲ್ಲಿಯೇ ಇದ್ದೆನು. ಆರೋಪಿ ಬಂದಿರುತ್ತಾರೆ ಎನ್ನುವಾಗ ಬೆಳಿಗ್ಗೆ 9 ರಿಂದ 9.30 ಗಂಟೆ ಸಮಯ ಆಗಿತ್ತು. ಆರೋಪಿ ಮೂರೂವರೆ ಲಕ್ಷ ರೂ. ಹಣವನ್ನು ನನ್ನ ಬಳಿ ಕೇಳಿರುತ್ತಾರೆ. ನಾನು ಆರೋಪಿಗೆ ಅಷ್ಟೂ ಹಣ ಇಲ್ಲ ಎಂದು ಹೇಳಿ 3,20,000/- ರೂ. ಹಣವನ್ನು ಕೊಟ್ಟಿರುತ್ತೇನೆ. ಆರೋಪಿ ಬಂದು ಹಣನ್ನು ಕೇಳಿದ ಒಂದು ವಾರಕ್ಕೆ ನಾನು ಅವರಿಗೆ ಹಣವನ್ನು

ಕೊಟ್ಟಿರುತ್ತೆನೆ ಒಂದು ವಾರ ಎಂದರೆ 7 ದಿನ ಎಂದರೆ ಸರಿ. ಆರೋಪಿ ನನ್ನ ಬಳಿ ಮೂರೂವರೆ ಲಕ್ಷ ರೂ. ಹಣನ್ನು ಕೇಳಿದ್ದು ನನ್ನ ಬಳಿ ಅಷ್ಟೂ ಹಣ ಇಲ್ಲ ಎಂದು ನಾನು ಆರೋಪಿಗೆ 3,20,000/- ರೂ. ಹಣವನ್ನು ಕೊಟ್ಟಿರುತ್ತೇನೆ ಎಂದು ಫಿರ್ಯಾದಿನಲ್ಲಿ ಬರೆಸಿಲ್ಲ.

7. ಆರೋಪಿ ಸುಮಾರು 7 ವರ್ಷಗಳಿಂದ ನಿಮಗೆ ಪರಿಚಯಸ್ಥರಾರಾಗಿದ್ದು ಅವರಿಗೂ ನಿಮಗೂ ಒಳ್ಳೆಯ ಒಡನಾಟ ಇದ್ದುದ್ದರಿಂದ ಅವರು ಯಾರ ಬಳಿ ಕೈಸಾಲ ಮಾಡಿದ್ದರು ಎನ್ನುವುದು ನಿಮಗೆ ಗೊತ್ತಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಆರೋಪಿ ಯಾರ ಬಳಿ ಕೈಸಾಲ ಮಾಡಿದ್ದರು ಎನ್ನುವುದನ್ನು ನಾನು ಕೇಳಿ ಅವರಿಂದ ತಿಳಿದುಕೊಂಡಿಲ್ಲ.

8. ನಾನು ಆರೋಪಿಗೆ ಕೊಟ್ಟಿರುತ್ತೇನೆ ಎನ್ನುವ ಹಣ ಎಲ್ಲವೂ 500 ರೂ. ಮುಖಬೆಲೆಯ ನೋಟುಗಳಾಗಿರುತ್ತದೆ. 500 ರೂ. ಮುಖಬೆಲೆಯ 6 ಬಂಡಲ್ ನೋಟುಗಳನ್ನು ಕೊಟ್ಟಿರುತ್ತೇನೆ. ಆರೋಪಿ ನನ್ನ ಬಳಿ ಬಂದು ಹಣವನ್ನು ಕೇಳಿರುತ್ತಾರೆ ಎನ್ನುವ ಹಿಂದಿನ ಎಷ್ಟು ದಿನದ ಮುಂಚಿತವಾಗಿ ನಿಮ್ಮ ಬಳಿ ಹಣ ಇತ್ತು ಎಂದರೆ ಸಾಕ್ಷಿಯು ಮುಂಚಿತವಾಗಿ ನನ್ನಲ್ಲಿ ಯಾವುದೇ ಹಣ ಇರಲಿಲ್ಲ ಎಂದು ನುಡಿಯುತ್ತಾರೆ. ಆಮೇಲೆ ಹಣ ಎಲ್ಲಿಂದ ಬಂತು ಎಂದರೆ ಸಾಕ್ಷಿಯು ನಾನು ಶುಂಠಿಯನ್ನು ಮಾರಾಟ ಮಾಡಿರುವುದರಿಂದ ಬಂದಿರುತ್ತದೆ ಎಂದು ನುಡಿಯುತ್ತಾರೆ. ನಾನು ಶುಂಠಿಯನ್ನು ಕಾಳಪ್ಪ ಎಂಬುವವರಿಗೆ ಮಾರಾಟ ಮಾಡಿರುತ್ತೇನೆ. ನನ್ನ ಬಳಿ ಇಂತಹ ದಿನ ಆರೋಪಿ ಬಂದು ಹಣವನ್ನು ಕೇಳಿದರು, ಆ ದಿನ ನನ್ನ ಬಳಿ ಹಣ ಇರಲಿಲ್ಲ ನಂತರ ನಾನು ಬೆಳೆದಿದ್ದಂತಹ ಶುಂಠಿಯನ್ನು ಮಾರಾಟ ಮಾಡಿ ಬಂದ ಹಣವನ್ನು ಆರೋಪಿಗೆ ಕೊಟ್ಟಿರುತ್ತೇನೆ ಎಂದು ಫಿರ್ಯಾದಿನಲ್ಲಿ ನಮೂದಿಸಿಲ್ಲ. ನನ್ನಿಂದ ಶುಂಠಿ ಖರೀದಿಸಿರುತ್ತಾರೆ ಎನ್ನುವ ವ್ಯಕ್ತಿ ನನ್ನಿಂದ ಶುಂಠಿಯನ್ನು ತೆಗೆದುಕೊಂಡ ದಿನವೇ ನನಗೆ ಹಣವನ್ನು ಕೊಟ್ಟಿರುತ್ತಾರೆ. ಆ ದಿನ ನನಗೆ 4 ಲಕ್ಷ ಚಿಲ್ಲರೆ ರೂ. ಹಣ ಬಂದಿತ್ತು.

9. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಗೆ ಸುಮಾರು 7 ವರ್ಷಗಳಿಂದ ಪರಿಚಯಸ್ಥರು ಎಂದರೆ ಅವರಿಬ್ಬರ ಬಳಿ ಇಬ್ಬರು ವ್ಯಕ್ತಿಗಳ ಮೊಬೈಲ್ ಸಂಖ್ಯೆ ಇರುತ್ತದೆ ಎಂದರೆ ಸರಿ. ಆರೋಪಿಯ ಮೊಬೈಲ್ ಸಂಖ್ಯೆ ಈಗ ಹೇಳಬಹುದೇ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ.

**ಮುಂದುವರಿದ ಪಾಟೀಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು.**

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸ.ಇ.

ಜೆ.ಎಂ.ಎಫ್.ಸಿ., ಹೊಳೆನರಸೀಪುರ.